



# ಸೀರೆ, ಗದ್ದೆಗೂ ಭೂಷಣ!

ಪ್ರಾಣಿಗಳಿಂದ ಫಸಲನ್ನು ಸಂರಕ್ಷಿಸಿಕೊಳ್ಳಲು ಮಲೆನಾಡಿನ ಕೆಲವು ರೈತರು ಕಂಡುಕೊಂಡಿರುವ ದೇಸಿ ಉಪಾಯ, ಸೀರೆ ಬೇಲಿ.

■ ಗಣಪತಿ ಹಾಸ್ಪುರ

ಅಭಿವೃದ್ಧಿಯ ಪಥದಲ್ಲಿ ಜಗತ್ತು ಎಷ್ಟೇ ವೇಗವಾಗಿ ದಾಪುಗಾಲಿಡುತ್ತಿದ್ದರೂ, ಆ ವೇಗ ಹಾಗೂ ಜೀವಕಳೆ ಕೃಷಿಕನ ಬದುಕಿಗೇನೂ ದೊರೆತಿಲ್ಲ. ಬೇಸಾಯಗಾರನ ತವಕತಲ್ಲಣಗಳು ಒಂದೆರಡಲ್ಲ. ರೈತ ಎದುರಿಸುತ್ತಿರುವ ಅಸಂಖ್ಯ ಸಮಸ್ಯೆಗಳಲ್ಲಿ, ಬೆಳೆದ ಬೆಳೆಯನ್ನು ಸಂರಕ್ಷಿಸಿಕೊಳ್ಳುವುದೂ ಒಂದು. ಅದರಲ್ಲಿಯೂ, ಮಲೆನಾಡಿನಲ್ಲಿ ಭತ್ತ ಬೆಳೆಯುವ ಕೃಷಿಕರಿಗೆ ಫಸಲನ್ನು ಉಳಿಸಿಕೊಳ್ಳುವುದು ಬಹುದೊಡ್ಡ ಸವಾಲು.

ಮಂಗ, ಹಂದಿ, ಮೊಲ, ಏಡಿ – ‘ಬೆಳೆ’ಯ ಮೇಲೆ ಮುಗಿಬೀಳುವ ಪ್ರಾಣಿಗಳು ಒಂದೇ ಎರಡೇ. ಕಾಡುಪ್ರಾಣಿಗಳ ದಾಳಿ ಹೆಚ್ಚಾಗಿದ್ದರಿಂದಲೇ ಮಲೆನಾಡಿನ ಭಾಗದಲ್ಲಿ ಭತ್ತದ ಕೃಷಿಯ ಪ್ರಮಾಣ ಕಡಿಮೆಯಾಗುತ್ತಿದೆ. ಆದರೂ ಕೆಲವು ಊರುಗಳಲ್ಲಿ ಮಧ್ಯಮ ವರ್ಗದ ಕೃಷಿಕರು ಗದ್ದೆಯ ಭೂಮಿ ಪಾಳು ಬಿಡಲು ಸಿದ್ಧರಿಲ್ಲ. ಮನೆ ಬಳಕೆಗಾದರೂ ದೊರೆಯಲಿ ಎಂದು ಭತ್ತದ ಕೃಷಿಯನ್ನು ಬಹಳ ಉಮೇದಿನಿಂದ ಮಾಡುತ್ತಿದ್ದಾರೆ. ಅವರಲ್ಲಿ ಕೆಲವರು ಫಸಲು ಉಳಿಸಿಕೊಳ್ಳಲು ದಾರಿಯೊಂದನ್ನು ಕಂಡುಕೊಂಡಿದ್ದಾರೆ. ಅದುವೇ ‘ಸೀರೆಯ ಬೇಲಿ’.

ಏನಿದು ಸೀರೆಯ ಬೇಲಿ? ಇಲ್ಲಿನ ಫೋಟೊಗಳನ್ನು ಸೂಕ್ಷ್ಮವಾಗಿ ನೋಡಿ. ಭತ್ತದ ಗದ್ದೆಯ ತುಂಬೆಲ್ಲಾ ಸೀರೆಗಳನ್ನು ತೋರಣದಂತೆ ಅಚ್ಚುಕಟ್ಟಾಗಿ ಜೋಡಿಸಲಾಗಿದೆ. ಸೀರೆಗಳ ಸಾಲನ್ನು ನೋಡಿದರೆ, ದೋಬಿಘಾಟ್ ನೆನಪಾಗಬೇಕು. ಗದ್ದೆಯ ಒಡೆಯ ಸೀರೆಯ ವ್ಯಾಪಾರಿ ಆಗಿರಬಹುದೇನೋ ಎಂದು ಕೆಲವರಿಗೆ ಅನ್ನಿಸಲೂಬಹುದು. ಆದರೆ, ವಿಷಯ ಬೇರೆಯೇ ಇದೆ. ಮಲೆನಾಡಿನಲ್ಲಿ ಕೃಷಿಕರ ಗದ್ದೆ–ತೋಟದ ಸುತ್ತಮುತ್ತ ಅರಣ್ಯ ಪ್ರದೇಶ ಇರುವುದು ಸಹಜ. ಕಾಡಿರುವುದರಿಂದ ಕಾಡುಪ್ರಾಣಿಗಳೂ ಇರುತ್ತವೆ. ಈ ಪ್ರಾಣಿಗಳು ಕೃಷಿಕರ ಜಮೀನಿಗೆ ನುಗ್ಗಿ ದಾಳಿ ಮಾಡಿ ಬೆಳೆಗಳನ್ನು ಧ್ವಂಸ ಮಾಡುತ್ತವೆ. ಈ ಉಪಟಳವನ್ನು ತಪ್ಪಿಸಿಕೊಳ್ಳುವ ಸಲುವಾಗಿ ಆಯಾ ಜಮೀನಿನ ಮಾಲೀಕರು ತಮ್ಮದೇ ಆದ ದಾರಿಗಳನ್ನು ಕಂಡುಕೊಂಡಿದ್ದಾರೆ. ಅಂಥದ್ದೊಂದು ‘ದೇಸಿ ದಾರಿ’, ಸೀರೆಯ ಬೇಲಿ.



ಭತ್ತದ ಗದ್ದೆಯ ಸುತ್ತಮುತ್ತ ಸೀರೆಗಳನ್ನು ಬೇಲಿಯಂತೆ ವ್ಯವಸ್ಥಿತವಾಗಿ ಕಟ್ಟಿದರೆ, ಕೆಲವು ಕಾಡುಪ್ರಾಣಿಗಳು ಫಸಲಿನ ಮೇಲೆ ಧ್ವಂಸ ಮಾಡುವುದನ್ನು ತಡೆಗಟ್ಟಲು ಸಾಧ್ಯವಿದೆ ಎನ್ನುತ್ತಾರೆ ಕೃಷಿಕರು. ವಿಶೇಷವಾಗಿ ಮಂಗಗಳ ಹಾವಳಿಯನ್ನು ತಪ್ಪಿಸಬಹುದು.

ಸೀರೆಗಳನ್ನು ಬೇಲಿಯಂತೆ ಬಳಸುವುದು ಅಗ್ಗದ ಬಾಬತ್ತೂ ಹೌದು. ಮನೆಮಂದಿಯಿಂದ ಹಳೆಯ ಸೀರೆಗಳನ್ನು ಸಂಗ್ರಹಿಸಿದರೆ ಬೇಲಿ ಸಿದ್ಧ.

ಕೃಷಿಕರು ತಾವು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಸ್ಥಳೀಯವಾಗಿಯೇ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ಆ ಪರಿಹಾರಗಳನ್ನು ಇನ್ನೂ ಹೆಚ್ಚು ವೈಜ್ಞಾನಿಕವಾಗಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಜ್ಞರ ನೆರವು ದೊರೆಯುವುದು ಅಗತ್ಯ.

ಪ್ರತಿಕ್ರಿಯಿಸಿ: feedback@sudha.co.in